**2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ,**

**ಎಸ್.ಸಿ.ನಂಃ-225/2023**

ಪಿ.ಡಬ್ಲ್ಯೂಃ- 10
ಸಿ.ಡಬ್ಲ್ಯೂಃ- 12

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಕಾವೇರಮ್ಮ |
| ಗಂಡನ ಹೆಸರುಃ | : | ಸೋಮಶೇಖರ |
| ವಯಸ್ಸುಃ | : | 59 ವರ್ಷ |
| ವೃತ್ತಿಃ | : | ಗೃಹಿಣಿ |
| ವಾಸಃ | : | ಕಲ್ಲಹಳ್ಳಿ ಗ್ರಾಮ. |

**ದಿನಾಂಕಃ 16-08-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನ್ಯಾಯಾಲಯದ ಮುಂದಿರುವ ಆರೋಪಿತ ಗೊತ್ತು. ಆರೋಪಿ ನನ್ನ ಅಳಿಯ. ನನ್ನ ಮಗಳಾದ ಅಂಬಿಕಾ ರವರ ವಿವಾಹ ಸುಮಾರು 14 ವರ್ಷದ ಹಿಂದೆ ಆರೋಪಿತನ ಜೊತೆ ನೆರವೇರಿರುತ್ತದೆ. ಅವರ ವಿವಾಹ ಸಂಬಂಧದಿಂದ ಅವರಿಗೆ ಇಬ್ಬರು ಮಕ್ಕಳು ಇರುತ್ತಾರೆ. 2023 ರಲ್ಲಿ ನನ್ನ ಮಗಳಾದ ಅಂಬಿಕಾ ರವರ ಶವವು ಅಂಕನಹಳ್ಳಿ ಗ್ರಾಮದ ನೀಲಗಿರಿ ಫಾರೆಸ್ಟಿನಲ್ಲಿ ಬಿದ್ದಿರುವ ಬಗ್ಗೆ ತಿಳಿದು ಬಂದ ಮೇರೆಗೆ ನಾನು ಸ್ಥಳಕ್ಕೆ ಹೋಗಿ ಅಂಬಿಕಾ ರವರ ಶವವನ್ನು ನೋಡಿರುತ್ತೇನೆ. ನನ್ನ ಮಗಳ ಮೃತ ದೇಹದ, ಮುಖದ ಮೇಲೆ ಕಲ್ಲು ಎತ್ತಿ ಹಾಕಿ ಆಕೆಯನ್ನು ಆಕೆಯ ಗಂಡನಾದ ಆರೋಪಿ ಚಂದ್ರಮೌಳಿ ಕೊಲೆ ಮಾಡಿರುತ್ತಾನೆ. ತನ್ನ ಕೆಟ್ಟು ಹೋಗಿರುವ ಆಟೋವನ್ನು ರಿಪೇರಿ ಮಾಡಿಸಲು ಹಣ

ಕೊಡುವಂತೆ ಆರೋಪಿತ ನನ್ನ ಮಗಳನ್ನು ಕೇಳಿದ್ದು ಆಕೆ ಹಣ ಕೊಡಲು ನಿರಾಕರಿಸಿದಾಗ ಆತ ಆಕೆಯನ್ನು ನೀಲಗಿರಿ ಫಾರೆಸ್ಟಿಗೆ ಕರೆತಂದು ಹೊಡೆದು ಕಲ್ಲನ್ನು ಎತ್ತಿ ಹಾಕಿ ಕೊಲೆ ಮಾಡಿರುತ್ತಾನೆ. ಈಗ ನೋಡುತ್ತಿರುವ ನಿಪಿ-9 ರಿಂದ 12 ಫೋಟೋಗಳಲ್ಲಿ ನನ್ನ ಮಗಳಾದ ಅಂಬಿಕಾ ರವರ ಮೃತದೇಹ ಕಂಡುಬರುತ್ತಿದೆ. ಈಗ ನೋಡುತ್ತಿರುವ ಫೋಟೋವಿನಲ್ಲಿ ಕಂಡು ಬರುವ ಮಾಸ್ಕು ಹಾಗೂ ಐಡಿ ಕಾರ್ಡು ನನ್ನ ಮಗಳ ಮಾಸ್ಕು ಹಾಗೂ ಐಡಿ ಕಾರ್ಡು ಆಗಿರುತ್ತವೆ. ಸಾಕ್ಷಿದಾರರು ಗುರುತಿಸಿದ ಫೋಟೋವನ್ನು ನಿಪಿ-26 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು: ಆರೋಪಿ ಪರ ಡಿಫೆನ್ಸ್ ಕೌನ್ಸಿಲ್ ರವರಿಂದ</u>**

2. ನನ್ನ ಮಗಳು ಮೃತಪಡುವ 12 ವರ್ಷಗಳ ಹಿಂದೆ ಆಕೆಯ ವಿವಾಹ ಆರೋಪಿತನ ಜೊತೆ ನಡೆದಿರುತ್ತದೆ. ವಿವಾಹ ಆದ ಕಾಲದಿಂದಲೂ ನನ್ನ ಮಗಳಾದ ಅಂಬಿಕಾ ಗಂಡನ ಮನೆಯಲ್ಲಿಯೇ ವಾಸವಾಗಿದ್ದಳು ಎಂದರೆ ಸರಿ. ಅಂಬಿಕಾ ಮೃತಪಡುವ 2 ವರ್ಷ ಮೊದಲಿನಿಂದ ಗಾರ್ಮೆಂಟ್ ಫ್ಯಾಕ್ಟರಿಯಲ್ಲಿ ಕೆಲಸಕ್ಕೆ ಹೋಗುತ್ತಿದ್ದಳು. ಸಾಮಾನ್ಯವಾಗಿ ನನ್ನ ಮಗಳು ಅಂಬಿಕಾ ಆರೋಪಿತನ ಆಟೋರಿಕ್ಷಾದಲ್ಲಿಯೇ ಗಾರ್ಮೆಂಟ್ ಫ್ಯಾಕ್ಟರಿಗೆ ಹೋಗುತ್ತಿದ್ದಳು. ನನ್ನ ಮಗಳು ಆರೋಪಿತನ ಆಟೋರಿಕ್ಷಾದಲ್ಲಿ ಗಾರ್ಮೆಂಟ್ ಗೆ ಹೋಗದೆ ಬೇರೆ ಆಟೋರಿಕ್ಷಾದಲ್ಲಿ ಹೋಗುತ್ತಿದ್ದಳು ಎಂದರೆ ಆರೋಪಿತ ಆಟೋರಿಕ್ಷಾ ಖರೀದಿಸುವ ಮೊದಲು ಬೇರೆ ವ್ಯಾನಿನಲ್ಲಿ ಗಾರ್ಮೆಂಟಿಗೆ ಹೋಗುತ್ತಿದ್ದಳು ಆನಂತರ ಆರೋಪಿತನ ಆಟೋದಲ್ಲಿಯೇ ಗಾರ್ಮೆಂಟಿಗೆ ಹೋಗುತ್ತಿದ್ದಳು. ಘಟನೆಯ ಬಗ್ಗೆ ನನಗೆ ಮಧ್ಯಾಹ್ನ 12 ಗಂಟೆ ಸಮಯಕ್ಕೆ ಬೇರೆಯವರಿಂದ ತಿಳಿದು ಬಂತು. ಮಧ್ಯಾಹ್ನ ಸುಮಾರು 1 ಗಂಟೆಯ ಸಮಯಕ್ಕೆ ನಾನು ಅಂಕನಹಳ್ಳಿಯ ನೀಲಗಿರಿ ಫಾರೆಸ್ಟಿಗೆ ಘಟನಾ

ಸ್ಥಳಕ್ಕೆ ಹೋಗಿರುತ್ತೇನೆ. ನಾನು 6 ಗಂಟೆಯವರೆಗೂ ಸ್ಥಳದಲ್ಲಿಯೇ ಇದ್ದೆ. ನಿಪಿ-9 ರಿಂದ 12 ಫೋಟೋಗಳಲ್ಲಿ ನನ್ನ ಇರುವಿಕೆ ಕಂಡು ಬರುವುದಿಲ್ಲ ಎಂದರೆ ಸರಿ. ಘಟನೆಯ ಬಗ್ಗೆ ನನಗೆ ಖುದ್ದು ಮಾಹಿತಿ ಇರುವುದಿಲ್ಲ ಎಂದರೆ ನನಗೆ ತಿಳಿದು ಬಂದಿರುತ್ತದೆ. ಘಟನೆಗೂ ಆರೋಪಿತನಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮಗಳ ಸಾವಿಗೆ ಆರೋಪಿತ ಕಾರಣನಲ್ಲ ಎಂದರೆ ಸರಿಯಲ್ಲ. ಆರೋಪಿತನಿಂದ ನನ್ನ ಮಗಳ ಕೊಲೆ ಆಗಿಲ್ಲ ಎಂದರೆ ಸರಿಯಲ್ಲ. ಮೃತ ಅಂಬಿಕಾ ರವರ ತಾಯಿಯಾದ ಕಾರಣ ಪೊಲೀಸರ ಹೇಳಿಕೆ ಮೇರೆಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳಕ್ಕೆ ಹೋಗಿಲ್ಲ ಹಾಗೂ ಮೃತ ಅಂಬಿಕಾ ರವರ ಮೃತದೇಹವನ್ನು ನೋಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್
ನ್ಯಾಯಾಧೀಶರು, ಹಾಸನ.